[ Govt. of Karnataka C.R.P. 67]

| |
|---|
| **Deposition Sheets (RP.No.57) Form No.4 (Civil)** |

**IN THE COURT OF <u>CIVIL JUDGE & J.M.F.C., KARKALA.</u>**

**Criminal Case No. 400-2017**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 1

ಸಾಕ್ಷಿದಾರನ ಹೆಸರು : ವಸಂತಿ

ಗಂಡನ ಹೆಸರು : ರಾಮಣ್ಣ ಪೂಜಾರಿ

ಪ್ರಾಯ : 50 ವರ್ಷ

ಉದ್ಯೋಗ : ಗೃಹಿಣಿ

ವಾಸ : ದುರ್ಗಾ ಗ್ರಾಮ, ಕಾರ್ಕಳ

ದಿನಾಂಕ 06.10.2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಚಾಸಾ-2 ನನ್ನ ಅಣ್ಣನ ಮಗ. ಚಾಸಾ-3 ನನ್ನ ಮೈದುನ. ನಾನು ಚಿನ್ನ ಕಳುವಾದ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಸುಮಾರು ಒಂದು ವರ್ಷದ ಹಿಂದೆ ಜುಲೈ 21 ರಂದು ನನ್ನ ಅತ್ತಿಗೆಗೆ ಕೈಗೆ ಶಸ್ತ್ರ ಚಿಕಿತ್ಸೆಯಾಗಿದ್ದು ಅವರನ್ನು ನೋಡುವ ಸಲುವಾಗಿ ಸುಮಾರು ಸಂಜೆ 4 ಗಂಟೆಗೆ ಉಡುಪಿಯಲ್ಲಿರುವ ಅಸ್ಪತ್ರೆಗೆ ಹೋಗಿರುತ್ತೇನೆ. ದಿನಾಂಕ 23 ರಂದು ನನ್ನ ಮೈದುನನಿಂದ ಕರೆ ಬಂದಿರುತ್ತದೆ. ವಿಚಾರಿಸಲಾಗಿ ನನ್ನ ಮನೆಯಬಾಗಿಲು ಮುರಿದ ಬಗ್ಗೆ ತಿಳಿಸಿರುತ್ತಾರೆ. ನಂತರ 24 ರಂದು ಮನೆಗೆ ಬಂದು ನೋಡಲಾಗಿ ಬೀಗ ಒಡೆದು ಬಿಸಾಡಿರುತ್ತಾರೆ ಮತ್ತು ಗೋದ್ರೇಜ್ ಕಾಪಾಟ್ ಬಾಗಿಲು ಮುರಿದು ಚಲ್ಲಾಪಿಲ್ಲಿಯಾಗಿರುತ್ತದೆ ಮತ್ತು ಕಪಾಟಿನ ಹತ್ತಿರ 2 ಕತ್ತಿಗಳು ಕಂಡುಬಂದವು ಮತ್ತು ಲಕ್ಷ್ಮೀ ಪೆಂಡೆಂಟ್ ಇರುವ ಒಂದು ಹವಳದ ಚೈನು, ಒಂದು ಬಾಬಾ ಪೆಂಡೆಂಟ್ ಇರುವ ಬಂಗಾರದ ಚೈನು, R ಎಂಬ ಅಕ್ಷರದಿಂದ ಬರೆದ ಒಂದು ಬಂಗಾರದ ಉಂಗುರ, ಮತ್ತೊಂದು ಸಾದಾ ಉಂಗರು ಕಳುವಾಗಿದ್ದವು.

ಈಗ ನಾನು ನೋಡುತ್ತಿರುವ ದಾಖಲೆಯು ನಾನು ನೀಡಿದ ಪಿರ್ಯಾದು ಅಗಿದ್ದು ಅದನ್ನು ನಿಪಿ- 1 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ನಂತರ ಪೋಲಿಸರು ನಮ್ಮ ಮನೆಗೆ ಬಂದು ಸದ್ರಿ ಘಟನೆಯ ಬಗ್ಗೆ ವಿಚಾರಿಸಿರುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆಯು ತಕ್ಷೀರು ಸ್ಥಳದ ಮಹಜರಾಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಸದ್ರಿ ಸ್ಥಳದಿಂದ ಒಂದು ಬೀಗ ಮತ್ತು 2 ಕತ್ತಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ದಾಖಲೆಯು ಘಟನ ಸ್ಥಳದ ಕಚ್ಚಾ ನಕ್ಷೆಯಾಗಿದ್ದು ಅದನ್ನು ನಿಪಿ- 3 ಎಂದು ಗುರುತಿಸಲಾಯಿತು ಮತ್ತು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 (ಎ) ಎಂದು ಗುರುತಿಸಲಾಯಿತು. ನಂತರ ನಾನು ಠಾಣೆಗೆ ಹೋಗಿ ಅಲ್ಲಿ ಆರೋಪಿಯನ್ನು ನೋಡಿದ್ದು ಸದ್ರಿ ಆರೋಪಿಯ ಹೆಸರು ಉಮನಾಥ ಪ್ರಭು ಎಂದು ತಿಳಿದು ಬಂತು. ಈಗ ನ್ಯಾಯಾಲಯದ ಮುಂದೆ ನಾನು ನೋಡುತ್ತಿರುವ ವ್ಯಕ್ತಿಯೇ ಸದ್ರಿ ಆರೋಪಿ. ಕಳುವಾದ ಸದ್ರಿ ಬಂಗಾರದ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ ಮತ್ತು ಅವುಗಳನ್ನು ನಾನು ಈಗಾಗಲೇ ನ್ಯಾಯಾಲಯದ ಮೂಲಕ ನನ್ನ ಸುಪರ್ದಿಗೆ ಪಡೆದುಕೊಂಡಿರುತ್ತೆನೆ ಮತ್ತು ಸಾಕ್ಷಿ ಸದ್ರಿ ಒಡವೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಅವುಗಳನ್ನು ಮು ಮಾ 1 ರಿಂದ 4 ಎಂದು ಗುರುತಿಸಲಾಯಿತು. ಸದ್ರಿ ಪೋಲೀಸರು ನನ್ನ ಮನೆಯಿಂದ ವಶಪಡಿಸಿಕೊಂಡಿರುವ 2 ಕತ್ತಿ ಮತ್ತು ಬೀಗ ವನ್ನು ನೋಡಿದರೆ ಗುರುತಿಸುತ್ತೇನೆ, ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು ಮಾ 5 ರಿಂದ 7 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಕೆ ಬಿ ಎಸ್ ವಕೀಲರಿಂದಃ

ನಾನು ದುರ್ಗಾ ಗ್ರಾಮದಲ್ಲಿ ಮನೆಯನ್ನು ಕಟ್ಟಿ ಸುಮಾರು 3 ವರ್ಷಗಳಾಗಿರುತ್ತದೆ. ಸದ್ರಿ ಮನೆಯು ಹಂಚಿನ ಮನೆಯಾಗಿದ್ದು ಮತ್ತು ಸದ್ರಿ ಮನೆಯು ನಂಬ್ರ ನನಗೆ ಗೊತ್ತಿಲ್ಲ, ಸದ್ರಿ ಮನೆಗೆ ನಂಬರವನ್ನು ನೀಡಿ ಮತ್ತು ಸದ್ರಿ ಮನೆಗೆ ಪಡಿತರ ಚೀಟಿಯನ್ನು ನೀಡಿರುವ ಬಗ್ಗೆ ಪೋಲೀಸರಿಗೆ ತಿಳಿಸಿರುವುದಿಲ್ಲ. ಸಾರ್ವಜನಿಕ ರಸ್ತೆಯು ನನ್ನ ಮನಯಿಂದ 10 ಅಡಿ ದೂರದಲ್ಲಿದೆ. ಸದ್ರಿ ರಸ್ತೆಯು ದುರ್ಗಾ – ಕಾರ್ಕಳ ಕಡೆಗೆ ಬಂದು ಹೋಗುವ ಸಾರ್ವಜನಿಕ ರಸ್ತೆ ಯಾಗಿರುತ್ತದೆ. ನನ್ನ ಮನೆಯು

ನನಗೆ ನನ್ನ ಮಾವನವರಿಂದ ಬಂದಂತಹ ಸ್ಥಿರಾಸ್ತಿಯಾಗಿರುತ್ತದೆ. ಸದ್ರಿ ಮನಗೆ ಮನೆಯ ಸುತ್ತ ಕಲ್ಲಿನ ಆವರಣ ಇದೆ. ನನ್ನ ಮನೆಗೆ ಗೇಟ್ ಇದ್ದು ಅದಕ್ಕೆ ನಾನು ಬೀಗವನ್ನು ಹಾಕುತ್ತೇನೆ. ನನ್ನ ಮನೆಯ ಪಕ್ಕದಲ್ಲಿ ಅಂದರೆ 30 ಅಡಿ ಅಂತರದಲ್ಲಿ ಸುಮಾರು 7-8 ಮನೆಗಳಿರುತ್ತವೆ. ನಾನು ಮನೆಯನ್ನು ಬೀಗ ಹಾಕಿಕೊಂಡು ಹೋದ ಸಮಯದಲ್ಲಿ ಅದರ ಬಗ್ಗೆ ನನ್ನ ನೆರೆಕರೆಯವರಿಗೂ ತಿಳಿಸಿ ಹೋಗುತ್ತೇನೆ ಮತ್ತು ನನ್ನ ಮನೆಯ ಮೇಲೆ ನೆರೆಕರೆಯವರು ನಿಗ ಇಟ್ಟಿರುತ್ತಾರೆ. ನನ್ನ ಅತ್ತಿಗೆಗೆ ಕೈ ಮುರಿದಿದ್ದರ ಪರಿಣಾಮ ನಾನು ದಿನಾಂಕ 23.07.2016 ರ ತನಕ ಉಡುಪಿಯ ಮಣಿಪಾಲ ಆಸ್ಪತ್ರೆಯಲ್ಲಿ ಅವರ ಯೋಗಕ್ಷೇಮ ನೋಡಿಕೊಳ್ಳುವ ಸಲುವಾಗಿ ಅಲ್ಲಿಯೇ ಇದ್ದೆ. ಸದ್ರಿ ದಿನವೆ ಸಂಜೆ 7 ಗಂಟೆಗೆ ನನ್ನ ಮೈದುನನಿಂದ ದೂರವಾಣಿ ಕರೆ ಬಂದಿರುತ್ತದೆ. ನಾನು ನನ್ನ ಪಿರ್ಯಾದಿನಲ್ಲಿ ತಿಳಿಸಿರುವಂತೆ ದಿ:21.07.2017 ರಂದು ಸಂಜೆ 4 ಗಂಟೆಯ ಸಮಯಕ್ಕೆ ಬಜಗೋಳಿಯಲ್ಲಿರುವ ನನ್ನ ಅತ್ತಿಗೆ ಪದ್ಮಾವತಿಯವರ ಮನೆಗೆ ಹೋಗಿ ಅಲ್ಲಿಯೇ ಉಳಿದುಕೊಂಡಿದ್ದೆ ಎಂದು ನಾನು ಪೋಲೀಸರಿಗೆ ಹೇಳಿರುವುದಿಲ್ಲ, ಸದ್ರಿ ಪಿರ್ಯಾದಿನಲ್ಲಿರುವ ಭಾಗಂಶವನ್ನು ನಿಡಿ- 1 ಎಂದು ಗುರುತಿಸಲಾಯಿತು.

ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎರಡನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ